RNU AIR DHARWAD

# OCTOBER 3, 2024
# ALL INDIA RADIO- DHARWAD
# PRADESH SAMACHARA (KANNADA) 7:05 AM

ಮುಖ್ಯಾಂಶಗಳು

- ನಾಡಿನಾದ್ಯಂತ ಇಂದಿನಿಂದ ನವರಾತ್ರಿ ಸಂಭ್ರಮ: ಆಚರಣೆಗೆ, ನಾಡಿನಾದ್ಯಂತ ಭರದ ಸಿದ್ಧತೆ.

- ವಿಶ್ವವಿಖ್ಯಾತ ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟನೆಗೆ ಕ್ಷಣಗಣನೆ: ಹಿರಿಯ ಸಾಹಿತಿ, ನಾಡೋಜ ಡಾ.ಹಂಪ ನಾಗರಾಜಯ್ಯ ಅವರಿಂದ ಚಾಲನೆ.

- ಪ್ರಕೃತಿ ಮತ್ತು ಪರಿಸರ ಸಮತೋಲನ ಕಾಯ್ದುಕೊಳ್ಳುವಲ್ಲಿ ವನ್ಯಜೀವಿಗಳ ಪಾತ್ರ ಮಹತ್ವದ್ದು–ಅರಣ್ಯ ಖಾತೆ ಸಚಿವ ಈಶ್ವರ್ ಖಂಡ್ರೆ.

- ನಾಡಿನಾದ್ಯಂತ ನಿನ್ನೆ ಮಹಾತ್ಮ ಗಾಂಧೀಜಿ, ಲಾಲ ಬಹಾದ್ದೂರ ಶಾಸ್ತ್ರಿ ಅವರ ಜನ್ಮದಿನ ಆಚರಣೆ: ವಿಧಾಯಕ ಕಾರ್ಯಕ್ರಮಗಳ ಮೂಲಕ ಗೌರವ ನಮನ.

ಈಗ ವಾರ್ತೆಗಳ ವಿವರ

*******

'ಶಿಷ್ಟರ ರಕ್ಷಣೆ; ದುಷ್ಟರ ಸಂಹಾರ'ದ, ಶಕ್ತಿಯ ಆರಾಧನೆಯ ಹಬ್ಬ, ನವರಾತ್ರಿ. ನವರಾತ್ರಿ, ಮಹಾನವಮಿ ಹೆಸರುಗಳಿಂದ ಆಚರಿಸಲ್ಪಡುವ, ಈ ಹಬ್ಬ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಆಯಾಮಗಳನ್ನು ಹೊಂದಿದೆ.

ಸರ್ವ ಮತ, ಪಂಥಗಳ ಬಂಧು–ಬಾಂಧವರು ಒಂದಾಗಿ ಆಚರಿಸುವ, ಶಕ್ತಿ ಆರಾಧನೆಯ ಹಬ್ಬವನ್ನು, ಉತ್ತರ ಭಾರತದಲ್ಲಿ ದುರ್ಗಾ ಪೂಜೆ, ದಕ್ಷಿಣ ಭಾರತದಲ್ಲಿ ಚಾಮುಂಡಿ ಮತ್ತು ಕಾಳಿಮಾತೆಯ ಆರಾಧನೆಯಾಗಿ, ಆಚರಿಸಲಾಗುತ್ತದೆ. ದೇವಿ ಮಹಾತ್ಮೆ ಪುರಾಣವನ್ನು ಅಥವಾ ಸಪ್ತಶತಿಯನ್ನು ದೇವಾಲಯಗಳಲ್ಲಿ, ಮನೆ ಮನೆಗಳಲ್ಲಿ ಪಾರಾಯಣ ಮಾಡಲಾಗುತ್ತದೆ.

ಇಂದಿನಿಂದ ಆರಂಭವಾಗುವ ನವರಾತ್ರಿ ಆಚರಣೆಗೆ, ನಾಡಿನಾದ್ಯಂತ ಭರದ ಸಿದ್ಧತೆಗಳು ನಡೆಯುತ್ತಿವೆ. ದೇವಾಲಯಗಳಲ್ಲಿ ನವರಾತ್ರಿ ಉತ್ಸವಕ್ಕೆ ದೀಪಾಲಂಕಾರ, ತಳಿರು ತೋರಣಗಳ ಅಲಂಕಾರ, ಹಬ್ಬದ ಖರೀದಿ ಭರಾಟೆ ಮನೆ ಮಾಡಿದೆ.

*******

ವಿಶ್ವವಿಖ್ಯಾತ ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟನೆಗೆ ಕ್ಷಣಗಣನೆ ಆರಂಭಗೊಂಡಿದ್ದು, ಇಂದಿನಿಂದ ಆರಂಭಗೊಳ್ಳಲಿರುವ ಶರನ್ನವರಾತ್ರಿ ಉತ್ಸವಕ್ಕೆ ಇಂದು ಬೆಳಿಗ್ಗೆ ಚಾಮುಂಡಿ ಬೆಟ್ಟದಲ್ಲಿ ಚಾಲನೆ ಸಿಗಲಿದೆ.

ಚಾಮುಂಡಿ ಬೆಟ್ಟದಲ್ಲಿ ಇಂದು ಬೆಳಗ್ಗೆ 9.15 ರಿಂದ 9.45 ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಹಿರಿಯ ಸಾಹಿತಿ, ನಾಡೋಜ ಡಾ.ಹಂಪ ನಾಗರಾಜಯ್ಯ ತಾಯಿ ಚಾಮುಂಡೇಶ್ವರಿ ದೇವಿಗೆ ಪು ಾರ್ಚನೆ ಮಾಡುವ ಮೂಲಕ ದಸರಾ ಮಹೋತ್ಸವ ಉದ್ಘಾಟಿಸಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹಾದೇವಪ್ಪ, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪ್ರಹ್ಲಾದ್ ಜೋಶಿ, ಹೆಚ್.ಡಿ ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ,  ವಿ ಸೋಮಣ್ಣ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

*******

ಗದಗ ಜಿಲ್ಲೆಯ ರೋಣ ತಾಲೂಕಿನ, ಅಬ್ಬಿಗೇರಿ ಗ್ರಾಮದಲ್ಲಿ ಇಂದಿನಿಂದ 12 ನೇ ತಾರೀಖಿನವರೆಗೆ, ಬಾಳೆಹೊನ್ನೂರಿನ ರಂಭಾಪುರಿ ಪೀಠದ, ಶ್ರೀ ಪ್ರಸನ್ನರೇಣುಕ ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ, 33 ನೇ ಶರನ್ನವರಾತ್ರಿ ದಸರಾ ಸಮ್ಮೇಳನ, ಇಂದು ಸಂಜೆ 7 ಗಂಟೆಗೆ ಆರಂಭಗೊಳ್ಳಲಿದೆ.

ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹಾಗೂ ನಾಡಿನ ಹಿರಿಯ ಮಠಾಧೀಶರು, ಧರ್ಮ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಇದೇ ಮೊದಲ ಬಾರಿಗೆ ಶ್ರೀಗಳ ದಸರಾ ದರ್ಬಾರ ಗ್ರಾಮದಲ್ಲಿ ನಡೆಯುತ್ತಿದ್ದು, ಕೃಷಿಕರ ಭಕ್ತಸಮೂಹ ಶ್ರೀಗಳನ್ನು ಪೂರ್ಣಕುಂಭದೊಡನೆ ಗ್ರಾಮಕ್ಕೆ ಸ್ವಾಗತಿಸಿತು.

ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ.

ವೀರಭದ್ರ ಶಿವಾಚಾರ್ಯ ಸ್ವಾಮೀಜಿ 35 ಸೆಕೆಂದುಗಳು

*******

ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಕಿತ್ತೂರಿನ ವೀರ ರಾಣಿ ಚನ್ನಮ್ಮನವರ, ಹೋರಾಟ ಹಾಗೂ ಜಯ ಗಳಿಸಿದ, ಐತಿಹಾಸಿಕ ಘಟನೆಯ ದ್ವಿ–ಶತಮಾನೋತ್ಸವ ಆಚರಣೆ ಹಿನ್ನೆಲೆ, ಈ ತಿಂಗಳ 23 ರಿಂದ 3 ದಿನಗಳ ಕಾಲ, ಕಿತ್ತೂರಿನಲ್ಲಿ 'ಕಿತ್ತೂರು ಉತ್ಸವ'ವನ್ನು, ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಕಿತ್ತೂರು ವಿಜಯದ ಸಂಕೇತವಾಗಿ, ಕಿತ್ತೂರು ವಿಜಯೋತ್ಸವ ಜ್ಯೋತಿ ರಥ ಯಾತ್ರೆಯನ್ನು, ನಾಡಿನಾದ್ಯಂತ ಆಯೋಜಿಸಲಾಗಿದ್ದು, ವಿಧಾನಸೌಧದ ಮುಂಭಾಗದ ಪ್ರತಿಮೆಗಳ ಬಳಿ, ಜ್ಯೋತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಿನ್ನೆ ಚಾಲನೆ ನೀಡಿದರು.

*******

ಪ್ರಕೃತಿ ಮತ್ತು ಪರಿಸರ ಸಮತೋಲನ ಕಾಯ್ದುಕೊಳ್ಳುವಲ್ಲಿ ವನ್ಯಜೀವಿಗಳ ಪಾತ್ರ ಮಹತ್ವದ್ದು, ಎಂದು ಅರಣ್ಯ ಖಾತೆ ಸಚಿವ ಈಶ್ವರ್ ಖಂಡ್ರೆ, ಅಭಿಪ್ರಾಯಪಟ್ಟಿದ್ದಾರೆ.

ವನ್ಯಜೀವಿ ಸಪ್ತಾಹದ ಅಂಗವಾಗಿ, 'ವನ್ಯ ಜೀವಿಗಳೊಂದಿಗೆ ಸಹಬಾಳ್ವೆ' ಧ್ಯೇಯದೊಂದಿಗೆ, ಕಬ್ಬನ್ ಪಾರ್ಕ್ ಮುಂಭಾಗದಿಂದ ಲಾಲಾಬಾಗ್‌ವರೆಗೆ, ಅರಣ್ಯ ಇಲಾಖೆ, ಆಯೋಜಿಸಿದ್ದ ಜನ ಜಾಗ್ರತಿ ನಡಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ಭಾರತ ಪಶ್ಚಿಮಘಟ್ಟ ಪೂರ್ವಘಟ್ಟದ ವಿಶಾಲ ಅರಣ್ಯ ಪ್ರದೇಶಗಳನ್ನು ಒಳಗೊಂಡು ಜೈವಿಕ ಪ್ರಬೇಧಗಳಿಗೆ ಸುರಕ್ಷಿತ ತಾಣವಾಗಿದೆ. ವನ್ಯಜೀವಿಗಳ ಬಗ್ಗೆ ಜಾಗೃತಿ ಮೂಡಿಸಲು ಸಪ್ತಾಹ ಅಚರಿಸಲಾಗುತ್ತಿದೆ ಎಂದರು.

ಸಪ್ತಾಹದ ಅಂಗವಾಗಿ ವಸ್ತು ಪ್ರದರ್ಶನ, ಗುಂಪು ಚರ್ಚೆ, ರಸಪ್ರಶ್ನೆ, ಅಂಚೆ ಚೀಟಿ ಸಂಗ್ರಹ, ಭಾ ´ಣ ಸ್ಪರ್ಧೆ ಕಾರ್ಯಕ್ರಮಗಳನ್ನು, ಆಯೋಜಿಸಲಾಗಿದೆ.

*******

ರಾಜ್ಯದಲ್ಲಿ 17 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಾತಿಗೂ, ಹೆಚ್ಚಿನ ಬೇಡಿಕೆ ಬರುವಂತೆ, ಯೋಜನೆ ರೂಪಿಸಲಾಗುತ್ತಿದೆ ಎಂದು, ಉನ್ನತ ಶಿಕ್ಷಣ ಖಾತೆ ಸಚಿವ ಡಾಕ್ಟರ್ ಎಂ.ಸಿ.ಸುಧಾಕರ್ ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲಾಸ್ಪತ್ರೆ ಆವರಣದಲ್ಲಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ 8 ಕೋಟಿ 20 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ, ರೇಡಿಯಾಲಜಿ ಕಟ್ಟಡದ ಕಾಮಗಾರಿಗೆ, ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ, ಎಂ.ಬಿ.ಬಿ.ಎಸ್. ಕೋರ್ಸ್ ಪ್ರವೇಶಾತಿಗೆ, ವ್ಯಾಪಕ ಬೇಡಿಕೆಯಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳೊಂದಿಗೆ, ಸರ್ಕಾರಿ ಜಿಲ್ಲಾಸ್ಪತ್ರೆಗಳು ಸಂಯೋಜನೆಗೊಂಡಿದ್ದು, ಇದರಿಂದ ವೈದ್ಯಕೀಯ ವಿದ್ಯಾರ್ಥಿಗಳ ಕ್ಷೇತ್ರಾನುಭವದ ಕಲಿಕೆಗೆ, ಇಂಬು ದೊರೆಯುತ್ತದೆ ಎಂದರು.

*******

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

*******

ಸ್ವಚ್ಛ ಭಾರತ ಅಭಿಯಾನದ ದಶಮಾನೋತ್ಸವ ಸಂದರ್ಭದಲ್ಲಿ, 'ಸಂಸ್ಕಾರ ಮತ್ತು ಸ್ವಭಾವ ಸ್ವಚ್ಛತೆ' ಧ್ಯೇಯದೊಂದಿಗೆ, ಮಹಾತ್ಮ ಗಾಂಧೀಜಿ ಅವರ 155 ನೇ ಜಯಂತಿ ಅಂಗವಾಗಿ, ದೇಶಾದ್ಯಂತ ಸ್ವಚ್ಛತಾ ಜನಾಂದೋಲನ ಜರುಗಿತು.

ಹೊಸ ದಿಲ್ಲಿಯಲ್ಲಿ ಆಯೋಜಿತ, ಪ್ರಧಾನ ಕಾರ್ಯಕ್ರಮದಲ್ಲಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಶಾಲಾ ಮಕ್ಕಳೊಂದಿಗೆ ಸ್ವಚ್ಛತಾ ಕಾರ್ಯ ಕೈಗೊಂಡು ನೈರ್ಮಲ್ಯ ಮತ್ತು ಸ್ವಚ್ಛತೆಗೆ ಸಂಬಂಧಿಸಿ, 9 ಸಾವಿರದ 600 ಕೋಟಿ ರೂಪಾಯಿ ಯೋಜನೆಗೆ ಚಾಲನೆ ನೀಡಿದರು.

ಬೆಂಗಳೂರಿನ ವಿಧಾನಸೌಧದಲ್ಲಿ ಆಯೋಜಿತವಾಗಿದ್ದ, ಮಹಾತ್ಮ ಗಾಂಧಿ ಜನ್ಮ ದಿನಾಚರಣೆ ಹಾಗೂ ಸ್ವಚ್ಛತಾ ಆಂದೋಲನಾ ಪ್ರತಿಜ್ಞಾ ವಿಧಿ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಗಾಂಧಿಜೀಯವರ ಸರ್ವೋದಯ ಮತ್ತು ಅಂಬೇಡ್ಕರ್ ಅವರ ಅಂತ್ಯೋದಯ ತಮ್ಮ ಸರ್ಕಾರದ ಧ್ಯೇಯವಾಗಿದೆ ಎಂದು, ಅವರು ತಿಳಿಸಿದರು

ಬೆಂಗಳೂರಿನ ಬಳೇಪೇಟೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ದೇಶಾದ್ಯಂತ ನಡೆದ ಸ್ವಚ್ಛತಾ ಅಭಿಯಾದಿಂದಾಗಿ ಕಳೆದ 10 ವರ್ಷಗಳಲ್ಲಿ ಭಾರತ ಸ್ವಚ್ಛತೆಯಲ್ಲಿ ವಿಶ್ವಕ್ಕೆ ಮಾದರಿಯಾಗಿದೆ ಎಂದು ಹೇಳಿದರು.

ಮೈಸೂರಿನಲ್ಲಿ ಸ್ವಚ್ಛತಾ ಸೇವಾ ಕಾರ್ಯಕ್ರಮಕ್ಕೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿ, ಸರ್ಕಾರಿ ಇಲಾಖೆಗಳ ಜೊತೆ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ, ಸ್ವಚ್ಛತಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ತುಮಕೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ, ವಿ.ಸೋಮಣ್ಣ, ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿದರು.

ಬಳ್ಳಾರಿ ರೈಲು ನಿಲ್ದಾಣದಲ್ಲಿ ಸ್ವಚ್ಛತಾ ಕಾರ್ಯದ ಮೂಲಕ ಗಾಂಧಿ ಜಯಂತಿಯನ್ನು ವಿಶೇಷವಾಗಿ ಆಚರಿಸಲಾಯಿತು.

ಬೆಳಗಾವಿಯ ಗೋಗಟೆ ವೃತ್ತದಿಂದ ವೀರಸೌಧದವರೆಗೆ ನಡೆದ ಸ್ವಚ್ಛತಾ ನಡಿಗೆಯಲ್ಲಿ, ವಿವಿಧ ಶಾಲೆಗಳ ನೂರಾರು ವಿದ್ಯಾರ್ಥಿಗಳು, ಸ್ಕೌಟ್ಸ್ ಮತ್ತು ಗೈಡ್ಸ್ ಕೆಡೆಟ್ ಹಾಗೂ ಸೇವಾದಳದ ಮಕ್ಕಳು ಸ್ವಚ್ಛತಾ ಕಾರ್ಯದಲ್ಲಿ, ಪಾಲ್ಗೊಂಡರು.

ದಕ್ಷಿಣ ಕನ್ನಡ ಜಿಲ್ಲಾಡಳಿತ ಮತ್ತು ನೆಹರು ಯುವ ಕೇಂದ್ರ ಮಂಗಳೂರು ವತಿಯಿಂದ, ಗಾಂಧಿ ಜಯಂತಿಯ ಅಂಗವಾಗಿ, ಉಳ್ಳಾಲ ಸಮೀಪದ ಸೋಮೇಶ್ವರ ಕಡಲ ತೀರದಲ್ಲಿ, ಸ್ವಚ್ಛತಾ ಕಾರ್ಯ ನಡೆಯಿತು. (07)

*******

ಗಾಂಧೀಜಿ ಅವರ ಜೀವನ ಮೌಲ್ಯಗಳು, ಇಂದಿಗೂ ದಾರಿದೀಪವಾಗಿವೆ ಎಂದು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋ ್. ಲಾಡ್ ಹೇಳಿದ್ದಾರೆ.

ಧಾರವಾಡದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಿದ್ದ, ಮಹಾತ್ಮ ಗಾಂಧೀಜಿಯವರ 155ನೇ ಜಯಂತ್ಯುತ್ಸವ ಹಾಗೂ ಲಾಲ ಬಹಾದ್ದೂರ ಶಾಸ್ತ್ರಿ ಅವರ, 120ನೇ ಜನ್ಮದಿನದ ನಿಮಿತ್ತ ಗೌರವ ಅರ್ಪಿಸಿ, ಅವರು ಮಾತನಾಡಿದರು.

ಮಹಾತ್ಮ ಗಾಂಧೀಜಿ ಅವರು, ತಮ್ಮ ತತ್ವ ಸಿದ್ಧಾಂತಗಳ ಮೂಲಕ, ವಿಶ್ವದ ಅನೇಕ ರಾಷ್ಟ್ರಗಳಿಗೆ ಆದರ್ಶವಾದ ಆಡಳಿತ ವ್ಯವಸ್ಥೆ ಕಲ್ಪಿಸಿದ್ದಾರೆ. ಮಾಜಿ ಪ್ರಧಾನಮಂತ್ರಿ ಲಾಲ ಬಹಾದ್ದೂರ್ ಶಾಸ್ತ್ರಿ ಅವರು, ದೇಶದ ಕೃಷಿ ಪದ್ಧತಿ, ರೈತರ ಬದುಕಿನ ಸುಧಾರಣೆಗೆ ಕ್ರಮವಹಿಸಿದರು. 'ಜೈ ಜವಾನ್, ಜೈ ಕಿಸಾನ್ ಘೋ ಣೆ' ಮೂಲಕ, ದೇಶದ ಚಿತ್ರಣವನ್ನೇ ಬದಲಿಸಿದರು, ಎಂದರು.

*******

ಸತ್ಯ, ಶಾಂತಿ, ಅಹಿಂಸೆಯ ಸಂದೇಶ ಸಾರುವ, ಗಾಂಧೀಜಿಯವರ ವಿಚಾರಧಾರೆಗಳು, ವಿಶ್ವಾದ್ಯಂತ ಪಸರಿಸಲಿ ಎಂದು, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್ ಬೋಸರಾಜು ಆಶಿಸಿದ್ದಾರೆ.

ರಾಯಚೂರು ನಗರದ ಮಹಾತ್ಮ ಗಾಂಧೀಜಿ ಜಿಲ್ಲಾ ಕ್ರೀಡಾಂಗಣದಲ್ಲಿ ಮಹಾತ್ಮ ಗಾಂಧೀಜಿ ಪುತ್ಥಳಿಗೆ, ಪು ್ಪ ನಮನ ಸಲ್ಲಿಸಿ, ಮಾತನಾಡಿದ ಅವರು, ಅಹಿಂಸೆ ಮತ್ತು ಸತ್ಯವನ್ನು ಬಳಸಿಕೊಂಡು, ಹೋರಾಟದ ಬಗೆಗಿನ ಅವರ ವಿಶಿ ್ಟ ವಿಧಾನವು, ಸ್ವಾತಂತ್ರ್ಯ ಚಳವಳಿಯ ಹಾದಿಯನ್ನು ಬದಲಿಸಿತು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಲು, ಲಕ್ಷಾಂತರ ಜನರನ್ನು ಪ್ರೇರೇಪಿಸಿತು ಎಂದರು.

*******

ಸ್ವಾತಂತ್ರ್ಯ ಹೋರಾಟಗಾರ, ಗಾಂಧಿವಾದಿ ಗುದ್ಲೆಪ್ಪ ಹಳ್ಳಿಕೇರಿ ಅವರ, ಜೀವನ ಚರಿತ್ರೆಯನ್ನು ಯುವ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ, ಹಾವೇರಿ ತಾಲೂಕಿನ ಹೊಸರಿತ್ತಿಯ ಗಾಂಧಿ ಗ್ರಾಮೀಣ ಗುರುಕುಲ ವಸತಿ ಶಾಲೆಯಲ್ಲಿ, ಸ್ಮೃತಿಚಿತ್ರ ಸಂಗ್ರಹಾಲಯ ರೂಪುಗೊಂಡಿದೆ.

ಹುಬ್ಬಳ್ಳಿಯ ಉದ್ಯಮಿ ಚಿಗುರುಪಾಟಿ ಸತ್ಯ ವರಪ್ರಸಾದ ಸಂಗ್ರಹಾಲಯ ಉದ್ಘಾಟಿಸಿದರು. ಗಾಂಧಿ ಗ್ರಾಮೀಣ ಗುರುಕುಲ ವಸತಿ ಶಾಲೆಯಲ್ಲಿ, ಗಾಂಧೀಜಿಯವರ 155ನೇ ಜಯಂತ್ಯುತ್ಸವ ಹಾಗೂ ಗುರುಕುಲದ 41ನೇ ಸಂಸ್ಥಾಪನಾ ದಿನಾಚರಣೆ ಆಚರಿಸಲಾಯಿತು.

*******

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

ನಾಡಿನಾದ್ಯಂತ ಇಂದಿನಿಂದ ನವರಾತ್ರಿ ಸಂಭ್ರಮ: ಆಚರಣೆಗೆ, ನಾಡಿನಾದ್ಯಂತ ಭರದ ಸಿದ್ಧತೆ.

ವಿಶ್ವವಿಖ್ಯಾತ ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟನೆಗೆ ಕ್ಷಣಗಣನೆ: ಹಿರಿಯ ಸಾಹಿತಿ, ನಾಡೋಜ ಡಾ.ಹಂಪ ನಾಗರಾಜಯ್ಯ ಅವರಿಂದ ಚಾಲನೆ.

ಪ್ರಕೃತಿ ಮತ್ತು ಪರಿಸರ ಸಮತೋಲನ ಕಾಯ್ದುಕೊಳ್ಳುವಲ್ಲಿ ವನ್ಯಜೀವಿಗಳ ಪಾತ್ರ ಮಹತ್ವದ್ದು–ಅರಣ್ಯ ಖಾತೆ ಸಚಿವ ಈಶ್ವರ್ ಖಂಡ್ರೆ.

ನಾಡಿನಾದ್ಯಂತ ನಿನ್ನೆ ಮಹಾತ್ಮ ಗಾಂಧೀಜಿ, ಲಾಲ ಬಹಾದ್ದೂರ ಶಾಸ್ತ್ರಿ ಅವರ ಜನ್ಮದಿನ ಆಚರಣೆ: ವಿಧಾಯಕ ಕಾರ್ಯಕ್ರಮಗಳ ಮೂಲಕ ಗೌರವ ನಮನ.

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.
ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.
********